ವಿಶ್ವ ಪ್ರಸಿದ್ಧ ಹೃದಯ ತಜ್ಞ ಕರ್ನಾಟಕದ ಡಾ. ದೇವಿ ಶೆಟ್ಟಿ ಅವರು ಹಿಂದೆಂದೋ ಮಾಡಿದ ಭಾಷಣವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಒಳಗಾಗಿತ್ತು. ಆ ವಿಡಿಯೊದಲ್ಲಿನ ದೇವಿ ಶೆಟ್ಟಿ ಅವರ ಮಾತಿನ ಸಾರಾಂಶ ಇಷ್ಟು:

“ನಮ್ಮ ದೇಶದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ವಿದೇಶಗಳಿಗೆ ತೆರಳಿ ಸೇವೆ ಸಲ್ಲಿಸುತ್ತಾರೆ. ಜಗತ್ತಿನ ಇತರ ದೇಶಗಳಲ್ಲಿ ವೈದ್ಯಕೀಯ ಶಿಕ್ಷಣ ನೀಡುವ ಪದ್ಧತಿಗಳು ಬದಲಾದರೂ ಭಾರತದಲ್ಲಿ ಮಾತ್ರ ಅದು ಬದಲಾಗಿಲ್ಲ. ವೈದ್ಯಕೀಯ ಶಿಕ್ಷಣ ಎನ್ನುವುದು ಪ್ರಸ್ತುತ ಸಿರಿವಂತರ ಕ್ಷೇತ್ರವಾಗಿದೆ. ನಾನು ಚಿಕ್ಕವನಿದ್ದಾಗ ಬಡವರ ಮಕ್ಕಳೂ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದರು. ಆದರೆ ಇಂದು ಬಡವರು ವೈದ್ಯಕೀಯ ಶಿಕ್ಷಣ ಪಡೆಯುವ ಕನಸು ಕಾಣುವುದು ಸಾಧ್ಯವೇ ಇಲ್ಲ ಎಂಬಷ್ಟು ಆ ಕ್ಷೇತ್ರ ದುಬಾರಿಯಾಗಿದೆ. ಇದು ಸಮಾಜದ ಮೇಲೆ ತುಂಬಾ ಕೆಟ್ಟ ಪರಿಣಾಮ ಬೀರುತ್ತದೆ. ಜಗತ್ತಿನಲ್ಲಿ ಬಡತನದ ಹಿನ್ನೆಲೆಯಿಂದ ಬಂದ ಎಷ್ಟೋ ಜನರು ಸಾಧನೆಗಳನ್ನು ಮಾಡುವ ಛಲ ಹೊಂದಿರುತ್ತಾರೆ. ಸಮಾಜದಲ್ಲಿ ಬದಲಾವಣೆ ತರಬೇಕು ಎಂಬ ತಹತಹ ಅವರ ಅಂತರಂಗದಲ್ಲಿ ಇರುತ್ತದೆ. ಶ್ರೀಮಂತರ ಮನೆಯ ಮಕ್ಕಳು ವೈದ್ಯಕೀಯ ಶಿಕ್ಷಣ ಪಡೆಯುವಾಗ ಸಾಮಾನ್ಯವಾಗಿ ಅವರು ರೇಡಿಯಾಲಜಿ, ಡರ್ಮಟಾಲಜಿ, ಕಾಸ್ಮೆಟಾಲಜಿ ಮುಂತಾದ ಕ್ಷೇತ್ರಗಳನ್ನಷ್ಟೇ ಆಯ್ಕೆ ಮಾಡಿಕೊಂಡು ಸ್ಪೆಷಲೈಸೇಷನ್ ಮಾಡುತ್ತಾರೆ. ಅವರಿಗೆ ಸಂಜೆ 5 ಗಂಟೆಗೆ ಮನೆಗೆ ಹೋಗಬೇಕು ಎಂಬ ತುಡಿತವಿರುತ್ತದೆ. ಮಧ್ಯರಾತ್ರಿ ರೋಗಿಯು ಮನೆಗೆ ಬಂದು ಬಾಗಿಲು ಬಡಿದು, ಹೆರಿಗೆ ನೋವು ಎಂದಾಗ ಹೊರಡುವ ಉತ್ಸಾಹ ಅವರಲ್ಲಿರುವುದಿಲ್ಲ. ಜಗತ್ತಿನಲ್ಲಿ ಉನ್ನತ ವೈದ್ಯಕೀಯ ಶಿಕ್ಷಣವು ಉಚಿತವಾಗಿ ಲಭಿಸುತ್ತಿದೆ. ಒಟ್ಟಿನಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸಮಸ್ಯೆಯು ಸರ್ಕಾರದಿಂದಷ್ಟೇ ಸೃಷ್ಟಿಯಾಗಿದೆ ಎನ್ನುವಂತಿಲ್ಲ. ಸಮಾಜದಲ್ಲಿ ತಿಳಿದವರು ಎನ್ನಿಸಿಕೊಂಡವರು ಸರಿಯಾದ ಪ್ರಶ್ನೆಗಳನ್ನು ಕೇಳುತ್ತಿಲ್ಲ.

- 12 ನಿಮಿಷಕ್ಕೊಮ್ಮೆ ಹೆರಿಗೆ ವೇಳೆ ಹೆಣ್ಣೊಬ್ಬಳು ಏಕೆ ಸಾಯಬೇಕು?
- 3 ಲಕ್ಷ ಮಕ್ಕಳು ಹುಟ್ಟಿದ ತಕ್ಷಣ ಸಾಯುವುದೇಕೆ?
- 12 ಲಕ್ಷ ಮಕ್ಕಳು ಹುಟ್ಟಿದ ವರ್ಷದೊಳಗೆ ಸಾಯುವುದು ಹೇಗೆ?

ಮೇಲಿನ ಪ್ರಶ್ನೆಗಳಲ್ಲಿನ ದುರಂತಗಳನ್ನು ಒಪ್ಪುವುದು ಸಾಧ್ಯವಿಲ್ಲ. ಗರ್ಭಿಣಿಗೆ ಆರೈಕೆ ಚೆನ್ನಾಗಿ ದೊರೆತರೆ ಸುಮಾರು ಶೇ. 14ರಷ್ಟು ಮಂದಿಗೆ ಮಾತ್ರ ಸಿಸೇರಿಯನ್ ಅಗತ್ಯವಿರುತ್ತದೆ. ಅಂದರೆ ವರ್ಷಕ್ಕೆ 52 ಲಕ್ಷ ಸಿಸೇರಿಯನ್ ಹೆರಿಗೆಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ನಮಗೆ 2 ಲಕ್ಷ ಪ್ರಸೂತಿ ತಜ್ಞರು (ಗೈನಕಾಲಜಿಸ್ಟ್) ಬೇಕು. ಆದರೆ, ನಮ್ಮಲ್ಲಿರುವುದು 50 ಸಾವಿರಕ್ಕೂ ಕಡಿಮೆ ತಜ್ಞರು. ಅವರಲ್ಲಿ ಎಲ್ಲರೂ ಪ್ರಸೂತಿ ಚಿಕಿತ್ಸೆ ಮಾಡುವುದಿಲ್ಲ. ಹೆಚ್ಚಿನವರು ನಗರಗಳಲ್ಲಿಯೇ ಇರುತ್ತಾರೆ. ಆದರೆ ಶೇ. 60ರಷ್ಟು ಹೆರಿಗೆಗಳು ನಡೆಯುವುದು ಗ್ರಾಮೀಣ ಪ್ರದೇಶಗಳಲ್ಲಿ. ಇಂಥ ಲೆಕ್ಕಾಚಾರ ಇನ್ನೂ ಹಲವು ವಿಭಾಗಗಳಿಗೆ ಅನ್ವಯವಾಗುತ್ತದೆ. ಲೆಕ್ಕಾಚಾರಗಳು ಹೀಗಿರುವಾಗಲೂ ಹಣವಿಲ್ಲ ಎಂಬ ನೆಪವನ್ನು ನಮ್ಮ ದೇಶದಲ್ಲಿ ಸುಮ್ಮನೆ ಒಡ್ಡಲಾಗುತ್ತದೆ. ವೈದ್ಯಕೀಯ, ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಶಿಕ್ಷಣವನ್ನು ಹಣದ ಹಿಡಿತದಿಂದ ಮುಕ್ತಗೊಳಿಸಬೇಕಾಗಿದೆ”.

ಡಾ. ದೇವಿ ಶೆಟ್ಟಿ ಅವರ ಮಾತುಗಳನ್ನು ಕೇಳಿದರೆ, ಆ ಮಾತುಗಳಲ್ಲಿನ ಕಾಳಜಿಯನ್ನು ಯಾರಾದರೂ ತಳ್ಳಿಹಾಕುವುದು ಸಾಧ್ಯವಿದೆಯೇ? ವೈದ್ಯಕೀಯ ಕ್ಷೇತ್ರ ಹಣವಂತರ ಕಪಿಮುಷ್ಟಿಯಲ್ಲಿದೆ ಎಂದು ಹೇಳಿರುವುದರಲ್ಲಿ ದೇವಿ ಶೆಟ್ಟಿ ಅವರು ಮೊದಲಿಗರೇನಲ್ಲ. ಬಹುಕಾಲದಿಂದ ಕೇಳಿಬರುತ್ತಿರುವ ಆಕ್ಷೇಪವಿದು. ಕೊರೊನಾ ವೈರಸ್ ಪ್ರವೇಶದಿಂದಾಗಿ ಆರೋಗ್ಯ ಕ್ಷೇತ್ರದ ಕಹಿ ವಾಸ್ತವ ಪ್ರಸ್ತುತ ಸ್ಪಷ್ಟವಾಗಿ ಕಣ್ಣಿಗೆ ರಾಚುತ್ತಿದೆ ಅಷ್ಟೇ. ಒಂದೆಡೆ ಚಿಕಿತ್ಸೆಗಳು ದುಬಾರಿಯಾಗುತ್ತಿವೆ. ಮತ್ತೊಂದೆಡೆ ಆರ್ಥಿಕತೆ ಕುಸಿದು ಬಿದ್ದು ಜನರ ಬಳಿ ಖರ್ಚು ಮಾಡಲು ಹಣ ಇಲ್ಲವಾಗಿದೆ.

ಕೊರೊನಾ ವೈರಸ್ ಬದುಕಿನ ಕುರಿತ ನಮ್ಮ ಹಲವು ದೃಷ್ಟಿಕೋನಗಳನ್ನು ಮರು ವಿಮರ್ಶೆಗೆ ಒತ್ತಾಯಿಸುತ್ತಿದೆ. ಜೀವನಾವಶ್ಯಕತೆ ಎಂದರೆ ಏನು ಎಂಬ ಪ್ರಶ್ನೆಯನ್ನು ನಮ್ಮ ಮುಂದಿಡುತ್ತಿದೆ. ಸಂಘಜೀವಿಯಾಗಿರುವ ಮನುಷ್ಯನಿಗೆ ಆರ್ಥಿಕತೆಗಿಂತಲೂ ಮುಖ್ಯವಾದ ಅನೇಕ ವಿಷಯಗಳಿವೆ ಎಂಬುದನ್ನು ಸಾರಿ ಹೇಳುತ್ತಿದೆ. ಆದರೆ ಅಭ್ಯಾಸ ಬಲವೋ ಎಂಬಂತೆ ಮನುಷ್ಯರು ಮಾತ್ರ ಜಾಣ ಕುರುಡರಾಗಿ ವರ್ತಿಸುವುದನ್ನೇ ಇಷ್ಟಪಡುತ್ತಾರೆ. ಮನುಷ್ಯನ ಬದುಕಿಗೆ ಅಗತ್ಯವಾದ ಗಾಳಿ, ನೀರು, ಮಣ್ಣು, ಬೆಳಕು ಸೃಷ್ಟಿಯಲ್ಲಿ ಅಗಾಧ ಪ್ರಮಾಣದಲ್ಲಿದೆ. ಈ ಸಂಪನ್ಮೂಲಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು, ಜವಾಬ್ದಾರಿಯಿಂದ ಬಳಸುವುದು ನಮ್ಮ ಕೆಲಸ. ದುರದೃಷ್ಟವಶಾತ್, ಆ ಜವಾಬ್ದಾರಿಯೇ ದೊಡ್ಡ ಸವಾಲಾಗಿಬಿಟ್ಟಿದೆ.

ಮೂಲಭೂತ ಸಂಪನ್ಮೂಲಗಳು ಸ್ವಚ್ಛವಾಗಿದ್ದರೆ ಆರೋಗ್ಯವೂ ಸಹಜವಾಗಿಯೇ ಚೆನ್ನಾಗಿರುತ್ತದೆ. ಆದ್ದರಿಂದಲೇ ಹಿರಿಯರು “ಆರೋಗ್ಯವೇ ಭಾಗ್ಯ” ಎಂದಿರುವುದು. ಆದರೆ ಯಾವುದು ಯಥೇಚ್ಛವಾಗಿ ಲಭ್ಯವಾಗುವುದೋ, ಅದರ ಬೇಡಿಕೆ ಕುಸಿಯುತ್ತದೆ ಎನ್ನುವುದು ಆರ್ಥಿಕತೆಯ ಲೆಕ್ಕಾಚಾರ. ಗಾಳಿ, ನೀರು, ಬೆಳಕು, ಮಣ್ಣು ವಿಪುಲವಾಗಿ ಇದೆಯಲ್ಲ ಎಂಬ ಸಲೀಸು ಮನೋಭಾವದಿಂದಲೇ ಆಡಳಿತ ವ್ಯವಸ್ಥೆಗಳು ವರ್ತಿಸುತ್ತವೆ. ಹಾಗಾಗಿ ದೇಶದ ಒಟ್ಟು

